ಕಟ್ಟಿಕೊಂಡು ಹನ್ನೆರಡು ಹದಿಮೂರು ವರ್ಷವಾದರೂ, ಬಳಕೆ ತಪ್ಪಿಲ್ಲ. ಆಗಾಗ ಬಿಡುವು ಮಾಡಿಕೊಂಡು ಫೋನು ಮಾಡುತ್ತಾನೆ. ನಿಜಕ್ಕಾದರೆ, ಇವೆಲ್ಲ ಕೈಯಿ – ಕೈಯಿಗೂ ಕೈಫೋನು ಬರುವುದಕ್ಕೂ ಹಿಂದಿನ ಮಾತು: ಆಗೆಲ್ಲ, ಅವನನ್ನು ನೆನೆದಿದ್ದೇ ಮಾತನಾಡಬೇಕನಿಸಿದರೆ ಮನೆಯ ಫೋನಲ್ಲದೆ ಬೇರೆ ದಾರಿ ತಾನೇ ಎಲ್ಲಿತ್ತು? ಅಭ್ಯಾಸಬಲ; ಇವೊತ್ತಿಗೂ ನಾನು ಅವನನ್ನು ಕರೆಯುವುದು ಲ್ಯಾಂಡ್‌ಲೈನಿನಲ್ಲಿಯೇ. ನನಗಾದರೂ ನಿದ್ದೆಯಿಂದೆಬ್ಬಿಸಿ ಕೇಳಿದರೂ ನಂಬರು ಬಾಯಿಗೆ ಬರುತ್ತದೆ. ಇತ್ತಿತ್ತಲಾಗಿ, ಈ ಮೊಬೈಲು ಬಂದ ಮೇಲೆ ಯಾರಿಗೂ ನಂಬರುಗಿಂಬರಿನ ಉಸಾಬರಿಯೇ ಇಲ್ಲವೇ?! ಮೋರೆ ಗೊತ್ತು, ಯಾರೆಂದು ಗೊತ್ತಿಲ್ಲ... ವೆನ್ನುವ ಹಾಗೆ, ಗುರುತಲ್ಲದ ಗುರುತಾಗಿಬಿಟ್ಟಿದೆ! ಇರಲಿ... ಈ ಜ್ಯಾಕಲಿನ್ ಯಾವೊತ್ತಿಗೂ ಅಲೇಕ್ಸ್ಯನ ಮನೆಫೋನನ್ನು ನಿಭಾಯಿಸುತ್ತಾಳಾಗಿ, ನಾವು, ಈ ತನಕ ಒಬ್ಬರೊಬ್ಬರ ಮುಖ ಕಾಣದೆಯೂ – ಧ್ವನಿಪರಿಚಯವಂತೂ ಚೆನ್ನಾಗಿಯೇ ಇದೆ!

‘ಆಹಾ! ಏನು ಹೇಳಿದೆ, ಜ್ಯಾಕಲಿನ್ ನೀನು? ನಾವಿಲ್ಲದೆ ಪಾರ್ಟಿ ನಡೆಯೋದಿಲ್ಲವಾ?’ ಕೇಳಿದೆ.

‘ಹೌದು ಮತ್ತೆ... ನಮ್ಮ ಸರ್ ಯಾವೊತ್ತು ಯಾರನ್ನೂ ಇಷ್ಟೆಲ್ಲ ಎದುರುನೋಡಿದ್ದಿಲ್ಲ...’ ಜ್ಯಾಕಲಿನ್‌ಳ ಮಾತಿಗೆ ನಗುವುದಲ್ಲದೆ, ಮತ್ತು ನಕ್ಕು ಬೀಗುವುದಲ್ಲದೆ – ಬೇರೆ ದಾರಿಯಿರಲಿಲ್ಲ!

ಈ ನಡುವೆ ಮಧುಕರಿಯ ನಸನಸೆ ತಗ್ಗಲಿಲ್ಲ. ಅರವತ್ತೆರಡು ವಯಸ್ಸಾದರೂ ಅವನು ಒನ್ನಮೂನೆ ಮುಖಹೇಡಿ. ಯಾರನ್ನೂ ತಾನಾಗಿಯೇ ಮಾತನಾಡಿಸಿಕೊಂಡು ಹೋಗುವವನಲ್ಲ. ಆದರೆ ಯಾರೇ ಮಾತು ಕುದುರಿಸಿದರೂ ಚೆನ್ನಾಗಿ ಬೆರೆಯುತ್ತಾನೆ. ಆಡತೊಡಗುತ್ತಾನೆ. ಸ್ನೇಹವೆಂಬ ಸ್ನೇಹವು ತಂತಾನೇ ಒಲಿದುಬರಬೇಕು; ಬೇಡಿ ಮಾಡಿಕೊಳ್ಳಬಲ್ಲ ಚೀಜು ಅದಲ್ಲವೆಂತಲೇ ಅವನ ಅಭಿಮತ. ಯಾವುದೇ ಪ್ರಸಕ್ತಿಯಲ್ಲಿ ಇಬ್ಬರು ಗೆಳೆಯರಿದ್ದಾರೆಂದರೆ, ಅಂತಹ ಗೆಳೆತನದ ನಿಯುಕ್ತಿಯಾದರೂ ಅಂತರಿಕ್ಷದಲ್ಲಿಯೇ ಜರುಗಿರುತ್ತದೆ... – ಅಂತನ್ನುತ್ತಿರುತ್ತಾನೆ. ‘ಸ್ನೇಹವೆಂಬುದೊಂದು ಯೋಗ; ಎರಡು ಜಾತಕಗಳು ತಂತಾನೇ ಹೊಂದಿ ಘಟಿಸುವಂಥದು!’ ಹೀಗೆಲ್ಲ, ಪರವಶನಾಗಿ ಆಡುವ ಅವನ ಮಾತನ್ನು ನನಗೂ ಅಲ್ಲಗಳೆಯಲಾಗುವುದಿಲ್ಲ. ‘ಈಗ, ನಿನಗೂ ಅಲೇಕ್ಸ್ಯನಿಗೂ ನಡುವೆ ಏನು ತಾನೇ ಈಕ್ವಲ್ಲಿದೆ, ಹೇಳು – ಮೋದ್... ನಿನಗೆ ಅರವತ್ತು, ಅವನಿಗೆ ನಲವತ್ತೈದು... ನೀನೋ ಅವಳಿ ಮೊಮ್ಮಕ್ಕಳಿರೋ ಅಜ್ಜಿ; ಅವನಿನ್ನೂ ಮದುವೆಗೆ ಹಾತೊರೀತಿರೋ ಗಂಡಸು... ಆದರೂ ಎಂಥ ಬಾಂಧವ್ಯ ಇದಲ್ಲವೆ? ಇದನ್ನೇ ನಾನು ಕಾಸ್ಮಿಕ್ ರಿಲೇಶನ್‌ಶಿಪ್ಪಂತನ್ನೋದೂ...’ ಎಂದೆಲ್ಲ ವ್ಯಾಖ್ಯಾನಿಸುತ್ತಾನೆ! ಏಕ್‌ದಮ್ ಫಿಲಸೊಫಿಕಲಾಗಿ ಮಾತು ಬೆಳೆಸುತ್ತಾನೆ!! ಇನ್ನು, ನಮ್ಮಿಬ್ಬರದೇ ಮದುವೆಯನ್ನೂ ಕುರಿತು, ಅವನಾಡುವುದು ಹೀಗೆಯೇ; ಆಕಾಶದಿಂದಾಚೆಗೆಲ್ಲೋ ನಡೆದ ಕಡುದೈವಿಕ ಒಪ್ಪಂದದ ಮೇರೆಗೆ ಜರುಗಿದ್ದು ಅನ್ನುತ್ತಾನೆ. ‘ಇಲ್ಲದಿದ್ದಲ್ಲಿ ನನ್ನಂತಹ ನಾನೂ, ನಿನ್ನಂತಹ ನೀನೂ ಹೀಗೊಂದಿಡೀ ಜನುಮದುದ್ದಕ್ಕೂ ಒಂದಾಗಿರಲು ಸಾಧ್ಯವೆ?!’ ಅನ್ನುತ್ತಾನೆ. ಹುಬ್ಬೇರಿಸುತ್ತಾನೆ. ಅವನಾಡುವುದು ಅಸಿಂಧುವಲ್ಲವೆನಿಸುತ್ತದೆ.

ವಾರದ ಹಿಂದಷ್ಟೇ, ಅಲೇಕ್ಸ್ಯ ಫೋನುಗೈದು ‘ಮಧು ಸರ್... ಮುಂದಿನ ಶನಿವಾರ, ನಮ್ಮನೇಲೊಂದು ಸಣ್ಣ ಕೂಟವಿದೆ... ದಯವಿಟ್ಟು ಬರಬೇಕು...’ ಅಂತಂದು, ವಿಷಯ ನನ್ನನ್ನು ಮುಟ್ಟುವುದಕ್ಕೆ ಮೊದಲೇ, ಮಧುಕರಿಯನ್ನು ಕರೆದಿದ್ದ. ಔತಣದ ಆಹ್ವಾನವನ್ನು ನನ್ನ ಮೂಲಕ ಹೇಳಿಸದೆ, ನೇರ ತನಗೇ ಇತ್ತನೆಂಬ ಸಲುವಿನಲ್ಲಿ – ನನ್ನೀ ಗಂಡ, ತೂಗಿ ತೂಗಿ ಬೀಗಿ ಸಡಗರಿಸಿದ್ದ.